ಕರ್ನಾಟಕ ವಿಧಾನಸಭೆ

ಶುಕ್ರವಾರ 29ನೇ ಜುಲೈ 2005ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಕೃಷ್ಣ) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ.

ಅಧ್ಯಕ್ಷರು : ಯಡಿಯೂರಪ್ಪನವರೇ ತಾವು ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಇವತ್ತು ಸಾಯಂಕಾಲದ ಒಳಗಡೆ ನಾವು ಬಜೆಟನ್ನು ಪಾಸ್ ಮಾಡಿ ಕೊಡಬೇಕಾಗಿದೆ. ನಿನ್ನೆ ನಡೆದದ್ದಕ್ಕೆ ನಾವು ಯಾರೂ ಕೂಡ ಜವಾಬ್ದಾರರು ಅಲ್ಲ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಾವು ಅಧ್ಯಕ್ಷರ ಕೊಠಡಿಯಲ್ಲಿ ಈಗತಾನೆ ಮಾತುಕತೆ ಆಡಿ ಬಂದಿದ್ದೇವೆ. ಒಂಬತ್ತು ಕಾಲು ಗಂಟೆಗೆ ನಾವೆಲ್ಲಾ ಬಂದು ನಮ್ಮ ಎಲ್ಲಾ ವಿರೋಧ ಪಕ್ಷದ ನಾಯಕರು ಕುಳಿತು ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು ಮತ್ತು ನಮ್ಮಿಂದ ಯಾವುದೇ ಅಡ್ಡಿ ಆತಂಕ ಆಗಬಾರದು ಎನ್ನುವಂಥಾದ್ದೇ ನಮ್ಮ ನಿಲುವು. ಹಾಗೆಯೇ ಕಳೆದ ಒಂದು ತಿಂಗಳಿನಿಂದ ಸುಸೂತ್ರವಾಗಿ ಅಧಿವೇಶನದ ಕಾರ್ಯಕಲಾಪಗಳು ನಡೆದುಕೊಂಡು ಬರುತ್ತಿವೆ. ನಿನ್ನೆ ಸಚಿವರು ಯಾರೂ ಇರಲಿಲ್ಲ. ರಾಜ್ಯದ ಜನತೆಗೆ ಗೊತ್ತಾಗಲಿ, ಎನ್ನುವ ದೃಷ್ಟಿಯಿಂದ ಏನೇ ಗೊಂದಲಗಳು ಇದ್ದರೂ ಸಚಿವರಾದರೂ ಇಲ್ಲಿ ಬಂದು ಕಾರ್ಯಕಲಾಪಗಳನ್ನು ನಡೆಸಿಕೊಡಬೇಕು. ಆ ದೃಷ್ಟಿಯಿಂದ ನಮ್ಮದೇ ಆದ ರೀತಿಯಲ್ಲಿ ಒಂದು ಪ್ರತಿಭಟನೆಯನ್ನು ನಿನ್ನೆ ಮಾಡಿದ್ದೇವೆ. ಮೂರು-ನಾಲ್ಕು ವಿಷಯಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ನಾನು ಬಜೆಟ್ ಬಗ್ಗೆ ಹೆಚ್ಚು ಮಾತನಾಡಿರಲಿಲ್ಲ. ನಾನು 10-12 ನಿಮಿಷ ಸಮಯ ಕೂಡ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಎಲ್ಲರೂ ಮಾತನಾಡಿದ್ದಾರೆ, ಸರ್ಕಾರ ನೇರವಾಗಿ ಉತ್ತರ ಕೊಡಲಿ. ವಾರ್ಷಿಕ ಬಜೆಟ್ 37, 162 ಕೋಟಿ ರೂಪಾಯಿಗಳಲ್ಲಿ ಈ ನಾಲ್ಕು ತಿಂಗಳುಗಳಿಗೆ 12,386 ಕೋಟಿ 55 ಲಕ್ಷ ರೂ. ಲೇಖಾನುದಾನಕ್ಕೆ ಇಡಲಾಗಿತ್ತು. ಇದರಲ್ಲಿ ಯೋಜನಾ ಕಾರ್ಯಕ್ರಮಕ್ಕೆ ನಾಲ್ಕು ತಿಂಗಳುಗಳಿಗೆ ಪ್ಲಾನ್ ಎಕ್ಸ್‌ಪೆಂಡಿಚರ್ 1,200 ಕೋಟಿ ರೂಪಾಯಿ ಇದೆ. ಇನ್ನೂ 13,555 ಕೋಟಿ ರೂಪಾಯಿ ವರ್ಷಕ್ಕೆ ಬೇಕಾಗಿದೆ. ಒಂದೇ ಮಾತು ಹೇಳಬೇಕೆಂದರೆ ನಾಲ್ಕು ತಿಂಗಳಲ್ಲಿ ಅಭಿವೃದ್ಧಿ ಕಾರ್ಯಕ್ಕೆ ಖರ್ಚು ಮಾಡುವುದಕ್ಕಿಂತ ಸಂಬಳ ಸಾರಿಗೆಗಳಿಗೇ ತಾವು ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೀರಿ. ಇವೊತ್ತು ನಾಲ್ಕು ತಿಂಗಳಿಗೆ ಲೇಖಾನುದಾನ ನಾವು ಕೊಡುವಂಥ ಉದ್ದೇಶ ಸಂಬಳ ಸಾರಿಗೆಯನ್ನು ಕೊಡಬೇಕು ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ವಿಶೇಷವಾದ ಗಮನವನ್ನು ಕೊಡಬೇಕು ಎಂದು. ಆದರೆ ಸರ್ಕಾರ ಆ ಕಡೆ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ನೀವು ಉತ್ತರ ಕೊಡುವಂಥ ಸಂದರ್ಭದಲ್ಲಿ ಅಂಕಿಅಂಶಗಳನ್ನು ಕೊಡುವಾಗ ಗೊತ್ತಾಗಬಹುದು. ರಸ್ತೆ ಮತ್ತು ಸಂಪರ್ಕ, ವಿದ್ಯುಚ್ಛಕ್ತಿ, ಕುಡಿಯುವ ನೀರಿನ ಕಾರ್ಯಕ್ರಮಗಳಿಗೆ

ಯಾವುದೇ ಆದ್ಯತೆಯನ್ನು ನೀವು ಈ ನಾಲ್ಕು ತಿಂಗಳಲ್ಲಿ ಕೊಡಲಿಲ್ಲ. ಕೃಷಿ ಕ್ಷೇತ್ರದಲ್ಲಿ ರೈತರಿಗೆ ನೀಡಿದಂಥ ಅನೇಕ ಭರವಸೆಗಳು ಈಡೇರಲಿಲ್ಲ. ರೆವಿನ್ಯೂ ಸರ್‌ಪ್ಲಸ್ ಇದೆ ಎಂದು ನಾವು ಬಜೆಟ್‌ನಲ್ಲಿ ಹೇಳಿದ್ದೇವೆ. ನಾಲ್ಕೈದು ತಿಂಗಳು ಕಂಟ್ರಾಕ್ಟರ್‌ಗಳಿಗೆ ಕೊಡಬೇಕಾದ ಬಿಲ್‌ಗಳ ಬಾಕಿಯನ್ನು ಪಾವತಿ ಮಾಡಿಲ್ಲ. ಅವರಿಗೆ ಅದನ್ನು ಪಾವತಿ ಮಾಡಿ ಆ ಕಾಮಗಾರಿ ಕೆಲಸದಲ್ಲಿ ಆ ಗುತ್ತಿಗೆದಾರರು ಭಾಗವಹಿಸುವಂತೆ ಸರ್ಕಾರ ಗಮನ ಕೊಡಲಿಲ್ಲ. ಎಜ್ಯುಕೇಶನ್, ಹೆಲ್ತ್ ಮತ್ತೆ ಪೊಲೀಸ್ ನೇಮಕಾತಿ ಕಡೆ ಸರ್ಕಾರ ಗಮನ ಹರಿಸಲಿಲ್ಲ. ವ್ಯಾಟ್‌ನಿಂದ 600 ಕೋಟಿ ರೂ. ಕಲೆಕ್ಷನ್ ಈ ನಾಲ್ಕು ತಿಂಗಳಲ್ಲಿ ಆಗಿದೆ ಎಂದು ಹೇಳುತ್ತೀರಿ. ಆದರೆ ಅದು ಅಭಿವೃದ್ಧಿ ಕಾರ್ಯಗಳಿಗೆ ಯಾವ ಮಟ್ಟದಲ್ಲಿ ಹರಿದು ಬರಬೇಕಾಗಿತ್ತೋ ಆ ಹಣ ಆ ರೀತಿ ಅಭಿವೃದ್ಧಿ ಕಾರ್ಯಗಳಿಗೆ ಬರಲಿಲ್ಲ. ಒಂದು ಆತಂಕದ ಸಂಗತಿಯೆಂದರೆ 2004–2005ನೆಯ ಸಾಲಿಗೆ ಕೇಂದ್ರ ಸರ್ಕಾರದ ಯೋಜನಾ ಆಯೋಗ ರಾಜ್ಯಕ್ಕೆ ಅಭಿವೃದ್ಧಿ ಕಾರ್ಯಗಳಿಗೆ 12322.92 ಕೋಟಿ ರೂಪಾಯಿಗಳ ಪ್ರಸ್ತಾವನೆಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆಯನ್ನು ನೀಡಿದೆ. ಅಂದರೆ ಪ್ಲಾನಿಂಗ್ ಕಮಿಶನ್ 12322.92 ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳಿಗೆ ಅನುಮೋದನೆಯನ್ನು ನೀಡಿದರೆ ಮತ್ತೆ ರಾಜ್ಯ ಸರ್ಕಾರ ಕೆಲವೊಂದು ಯೋಜನೆಗಳನ್ನು ಮಾರ್ಪಡಿಸಿದ ಮೇಲೆ ಯೋಜನಾ ಆಯೋಗ ಪುನರ್‌ವಿಮರ್ಶಿತ ಪ್ರಸ್ತಾವನೆಯಾದ 11741.17 ಕೋಟಿ ರೂಪಾಯಿಗಳಿಗೆ ತನ್ನ ಅಂತಿಮ ಒಪ್ಪಿಗೆಯನ್ನು ಕೊಟ್ಟಿತ್ತು. ಬಹಳ ನೊಂದು ಒಂದು ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ರಾಜ್ಯದ ವಿವಿಧ ಇಲಾಖೆಗಳ ಹಲವಾರು ಅಭಿವೃದ್ಧಿ ಕೆಲಸಗಳು ನಡೆಯದ ಕಾರಣ ರಾಜ್ಯದ ಅಭಿವೃದ್ಧಿಗೆ ನಿಗದಿ ಮಾಡಿದ್ದಂಥ 11741.17 ಕೋಟಿ ರೂಪಾಯಿಗಳಲ್ಲಿ ಸುಮಾರು 2994.58 ಕೋಟಿ ರೂಪಾಯಿಗಳನ್ನು 2004–05ರಲ್ಲಿ ನೀವು ವೆಚ್ಚ ಮಾಡಲಿಲ್ಲ. ಮಾರ್ಚ್ ಎಂಡ್‌ಗೆ ನೀವೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ಹೇಳುತ್ತಿದ್ದೇನೆ. ಕೊನೆಯಲ್ಲಿ ಅಕಸ್ಮಾತ್ 300 ಅಥವಾ 400 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ ಎಂದು ನೀವು ಹೇಳಿದರೂ ಕೂಡ ಸುಮಾರು 2500 ಕೋಟಿ ರೂ. ಗೂ ಹೆಚ್ಚು ಪ್ಲಾನಿಂಗ್ ಕಮಿಶನ್ ಕ್ಲಿಯರೆನ್ಸ್ ಕೊಟ್ಟ ಮೇಲೂ ಕೂಡ ಅದಕ್ಕೆ ಅನುಮೋದನೆ ತೆಗೆದುಕೊಂಡು ಕೆಲಸ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅಗ್ರಿಕಲ್ಚರಲ್ ಅಲೈಡ್ ಆ್ಯಕ್ಟಿವಿಟೀಸ್‌ಗೆ 801.01 ಕೋಟಿ ರೂ. ಇದ್ದರೆ ನೀವು 31–3–2005ಕ್ಕೆ ಖರ್ಚು ಮಾಡಿರುವುದು 550 ಕೋಟಿ 91 ಲಕ್ಷ ರೂ. ರೂರಲ್ ಡೆವಲಪ್‌ಮೆಂಟ್‌ಗೆ 571 ಕೋಟಿ 18 ಲಕ್ಷ ಇದ್ದರೆ ನೀವು ಖರ್ಚು ಮಾಡಿರುವುದು 420 ಕೋಟಿ 68 ಲಕ್ಷ ಸ್ಪೆಶಲ್ ಏರಿಯಾ ಪ್ರೋಗ್ರಾಂಗೆ 60 ಕೋಟಿ ರೂ. ಇದ್ದರೆ ನೀವು ಖರ್ಚು ಮಾಡಿರುವುದು 44.88 ಕೋಟಿ ರೂ. ಇನ್ನು ವಾಟರ್ ರಿಸೋರ್ಸ್ ಅದೊಂದಕ್ಕೆ ಮಾತ್ರ 3286.46 ಕೋಟಿ ರೂಪಾಯಿಗಳಿದ್ದರೆ ನೀವು ಇದಕ್ಕೊಂದಕ್ಕೆ ಮಾತ್ರ 3283.81 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇನ್ನು ಪವರ್ ಅಂಡ್ ಎನರ್ಜಿಯಲ್ಲಿ ಇಷ್ಟೊಂದು ಸಮಸ್ಯೆ ಇದೆ ಎಂದು ಹೇಳಿದಾಗ ಇದಕ್ಕೆ 1629.40 ಕೋಟಿ ರೂಪಾಯಿಗಳಿದ್ದರೆ ನೀವು ಮಾರ್ಚ್ ಎಂಡ್‌ವರೆಗೆ ಖರ್ಚು ಮಾಡಿರುವುದು 1152.59 ಕೋಟಿ ರೂಪಾಯಿಗಳು ಮಾತ್ರ. ಇನ್ನು ಇಂಡಸ್ಟ್ರೀಸ್ ಅಂಡ್ ಮೈನ್ಸ್‌ಗೆ 142.26 ಕೋಟಿ ರೂ.ಗೆ ಕೇಂದ್ರದ ಅನುಮತಿ ನಿಮಗೆ ಸಿಕ್ಕಿದ್ದರೆ ನೀವು ಖರ್ಚು ಮಾಡಿರುವುದು 64.11 ಕೋಟಿ ರೂ. ಮಾತ್ರ. ಟ್ರಾನ್ಸ್‌ಪೋರ್ಟ್‌ಗೆ, ಆಶ್ಚರ್ಯವೆಂದರೆ 1644.05 ಕೋಟಿ ರೂಪಾಯಿಗಳಿಗೆ ನಿಮಗೆ

ಕ್ಲಿಯರೆನ್ಸ್ ಕೊಟ್ಟರೆ ನೀವು ಖರ್ಚು ಮಾಡಿರುವುದು 394 ಕೋಟಿ 17 ಲಕ್ಷ ರೂ. ಮಾತ್ರ. ಸೈನ್ಸ್ ಅಂಡ್ ಟೆಕ್ನಾಲಜಿ, ಹೀಗೆ ಎಲ್ಲದರಲ್ಲೂ ನೀವು ಯಾವುದೇ ನೋಡಿದರೂ ಕೂಡ ಸುಮಾರು ಎರಡೂವರೆ ಸಾವಿರ ಕೋಟಿ ರೂ. ಗೂ ಅಧಿಕ ಮೊತ್ತದ ಹಣವನ್ನು ತಾವು ಖರ್ಚು ಮಾಡಲಿಲ್ಲ ಎನ್ನುವಂಥಾದ್ದು ಬಹಳ ನೋವು ತರುವಂಥ ಸಂಗತಿ. ಬಹುಶಃ ಆ ಬಗ್ಗೆ ಸರ್ಕಾರ ವಿಶೇಷವಾದ ಗಮನವನ್ನು ಕೊಡಬೇಕು ಎನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ. ಒಂದೆರಡು ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ರಾಜ್ಯದ ರೈತಸಮೂಹ ಜಾತಕ ಪಕ್ಷಿಯಂತೆ, ಕಾಯುತ್ತದೆ. ತಾವು ಉತ್ತರವನ್ನು ಕೊಡುವಂಥ ಕಾಲದಲ್ಲಿ 31.3.2005 ರೊಳಗೆ ಯಾರು ಕೋ-ಆಪರೇಟಿವ್ ಲೋನ್‌ನಲ್ಲಿ ಅಸಲು ಮತ್ತು ಬಡ್ಡಿಯನ್ನು ಕಟ್ಟಿದ್ದಾರೋ, ಇದರ ಬಗ್ಗೆ ಇಲ್ಲಿ ವ್ಯಾಪಕವಾಗಿ ಚರ್ಚೆಯಾಯಿತು. ತಾವು ಈ ಬಗ್ಗೆ ಸಮಯವನ್ನು ಕೇಳಿದಿರಿ. ನಾವು ಮಧ್ಯದಲ್ಲಿ ಈ ವಿಷಯವನ್ನು ತೆಗೆದುಕೊಂಡರೆ ಇಲ್ಲಿ ಬೇರೆ ಕಾರ್ಯಕಲಾಪಕ್ಕೆ, ಚರ್ಚೆಗೆ ಅಡ್ಡಿಯಾಗುತ್ತದೆ ಎಂದು ನಾವೂ ಕೂಡ ಪ್ರಸ್ತಾಪ ಮಾಡಲಿಲ್ಲ. ಇದು ಒಂದು ರೀತಿ ಜಂಟ್ಲ್‌ಮನ್ ಅಗ್ರಿಮೆಂಟ್ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ, ಇದು ಆಗಬಾರದು. ಯಾರು ಪ್ರಾಮಾಣಿಕ ರೈತರು 31-3-2005 ರೊಳಗೆ ಅಸಲು ಮತ್ತು ಬಡ್ಡಿಯನ್ನು ಪಾವತಿ ಮಾಡಿದ್ದಾರೋ ಬಹುತೇಕ ನಾವೆಲ್ಲರೂ ಒಪ್ಪಿಕೊಂಡಂತೆ ತಾವು ಉತ್ತರ ಕೊಡುವಂಥ ಕಾಲದಲ್ಲಿ ಯಾರು ರೈತರು ಪ್ರಾಮಾಣಿಕವಾಗಿ ಅಸಲು ಮತ್ತು ಬಡ್ಡಿಯನ್ನು ಕಟ್ಟಿದ್ದಾರೋ ಅವರಿಗೆ ಬಡ್ಡಿ ವಾಪಸ್ ಕೊಡುತ್ತೇವೆ ಎನ್ನುವಂಥ ಸ್ಪಷ್ಟವಾದ ಉತ್ತರವನ್ನು ತಾವು ಕೊಟ್ಟರೆ ರೈತ ಸಮೂಹಕ್ಕೆ ಒಂದು ರೀತಿಯಲ್ಲಿ ನ್ಯಾಯ ದೊರಕಿಸಿದಂತೆ ಆಗುತ್ತದೆ. ಯಾರು ಪ್ರಾಮಾಣಿಕವಾಗಿ ಕಷ್ಟವೋ ಸುಖವೋ ನಿಗದಿತ ಸಮಯಕ್ಕೆ ರೀ-ಪೇಮೆಂಟ್ ಮಾಡುವ ಅಭ್ಯಾಸವನ್ನು ಇಟ್ಟುಕೊಂಡಿದ್ದಾರೋ ಅವರಿಗೆ ಮೋಸ ಮಾಡಿದಂತೆ ಆಗುವುದಿಲ್ಲ. ಆದ್ದರಿಂದ ನೀವೇ ಈ ಸದನದಲ್ಲಿ ಭರವಸೆ ಕೊಟ್ಟಂತೆ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಕಾಲದಲ್ಲಿ 31-3-2005 ರೊಳಗಾಗಿ ಯಾವ ರೈತರು ಅಸಲು ಮತ್ತು ಬಡ್ಡಿಯನ್ನು ಕಟ್ಟಿದ್ದಾರೋ ಆ ಬಡ್ಡಿಯನ್ನು ಸಂಪೂರ್ಣ ಅವರಿಗೇ ಹಿಂದಕ್ಕೆ ಕೊಡುವಂಥ ಅಥವಾ ಅವರ ಲೋನ್‌ಗೆ ಅಡ್ಜೆಸ್ಟ್ ಮಾಡುವಂಥ ಯಾವುದಾದರೂ ಒಂದು ತೀರ್ಮಾನವನ್ನು ತಾವು ತೆಗೆದುಕೊಳ್ಳಬೇಕು ಎನ್ನುವಂಥ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಹೆಚ್.ಕೆ. ಪಾಟೀಲರೂ ಹಿಂದೆ ನೀರಾವರಿ ಸಚಿವರು ಆಗಿದ್ದರು, ಮುಖ್ಯಮಂತ್ರಿಗಳು ಈಗ ಇಲ್ಲಿ ಇದ್ದಾರೆ. ಒಂದು ಮಾತನ್ನು ನೊಂದು ನಾನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀರಾವರಿ ಯೋಜನೆಯನ್ನು ಸಂಪೂರ್ಣವಾಗಿ ನಾವು ನಿರ್ಲಕ್ಷ್ಯ ಮಾಡಿದ್ದೇವೆ. ಸನ್ಮಾನ್ಯ ನೀರಾವರಿ ಸಚಿವರು ಬೇರೆ ಕೆಲಸಕ್ಕೆ ಹೋಗಿ ಬರುತ್ತೇನೆ ಎಂದು ಹೇಳಿ ಹೋಗಿದ್ದಾರೆ. ಬಹುಶಃ ಎಷ್ಟರಮಟ್ಟಿಗೆ ಅವರು ಬಿಜಿ ಇದ್ದಾರೆ ಎಂದರೆ ಕಾವೇರಿ ಬೇಸಿನ್ ಇರಲಿ ಅಥವಾ ಕೃಷ್ಣಾ ಬೇಸಿನ್ ಇರಲಿ, ಗೋದಾವರಿ ಬೇಸಿನ್ ಇರಲಿ, ಇಲ್ಲಿಗೆ ಎಲ್ಲಾದರೂ ಕೂಡ ಒಂದೆರಡು ಮೂರು ಬಾರಿಯಾದರೂ ಹೋಗಿ ಇನ್ಸ್‌ಪೆಕ್ಷನ್‌ಗಳನ್ನು ಮಾಡಿ ಅಲ್ಲಿ ಏನಾಗಿದೆ, ಏನಾಗುತ್ತಿದೆ ಎಂಬುದನ್ನು ನೋಡಿಕೊಂಡು ಬನ್ನಿ ಎಂದರೆ, ಅದಕ್ಕೂ ಅವರಿಗೆ ಪುರುಸೊತ್ತು ಆಗಿಲ್ಲ. ಇಷ್ಟರಮಟ್ಟಿಗೆ ನೀರಾವರಿ ಯೋಜನೆಗೆ

ಸಂಪೂರ್ಣವಾಗಿ ತಾವು ನಿರ್ಲಕ್ಷ್ಯ ಮಾಡಿದ್ದೀರಿ. ಒಂದು ಮಾತನ್ನು ನಾನು ಹೇಳುತ್ತೇನೆ. ಪಕ್ಕದ ಆಂಧ್ರ, ಮಹಾರಾಷ್ಟ್ರ 'ಎ' ಸ್ಕೀಂನಲ್ಲಿ ಬಂದ ನೀರನ್ನು ಉಪಯೋಗ ಮಾಡಿಕೊಂಡು 'ಬಿ' ಸ್ಕೀಂನಲ್ಲಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿರಬೇಕಾದರೆ ಕರ್ನಾಟಕ ಮಾತ್ರ 'ಎ' ಸ್ಕೀಂ ಮತ್ತು 'ಬಿ' ಸ್ಕೀಂ ನಲ್ಲಿ ಕೃಷ್ಣಾ ಕೊಳ್ಳದಲ್ಲಿ, ಕಾವೇರಿ ಕೊಳ್ಳದಲ್ಲಿ, ಗೋದಾವರಿ ಕೊಳ್ಳದಲ್ಲಿ, ನೇತ್ರಾವತಿ ಇರಬಹುದು, ಕಾಳಿ ಇರಬಹುದು, ವರಾಹಿ ಇರಬಹುದು, ಕನಿಷ್ಠ ಸುಮಾರು 650 ಟಿ.ಎಂ.ಸಿ. ನೀರನ್ನು ನೀವು ಬಳಸಿಕೊಳ್ಳಬೇಕಾಗಿದೆ. 650 ಟಿ.ಎಂ.ಸಿ. ಎಂದರೆ ಒಂದು ಟಿ.ಎಂ.ಸಿ.ಗೆ ಹತ್ತು ಸಾವಿರ ಎಕರೆ ನೀರಾವರಿ ಮಾಡುತ್ತೇವೆ ಎಂದು ಆ್ಯವರೇಜ್ ತೆಗೆದುಕೊಂಡರೂ ಕೂಡ ಸುಮಾರು 65 ಲಕ್ಷ ಎಕರೆ ಜಮೀನು ನೀರಾವರಿಯಿಂದ ನಮ್ಮ ರಾಜ್ಯದ ರೈತರು ವಂಚಿತರಾಗಿದ್ದಾರೆ. ನೀವು ಆಮೆ ವೇಗದಲ್ಲಿ ಇದೇ ರೀತಿ ಕಾರ್ಯವನ್ನು ಮುಂದುವರಿಸಿದ್ದೇ ಆದರೆ ಇನ್ನು ಇಪ್ಪತ್ತು ವರ್ಷಗಳಾದರೂ ಕೂಡ ನಮ್ಮ ನೀರಾವರಿ ಯೋಜನೆಗಳು ಪೂರ್ಣವಾಗುವುದಿಲ್ಲ, ನಮ್ಮ ರೈತರಿಗೆ ನ್ಯಾಯ ಸಿಗುವುದಿಲ್ಲ. ಸುಮಾರು 60 ರಿಂದ 65 ಲಕ್ಷ ಎಕರೆಗೆ ನೀರಾವರಿಯಾಗಬೇಕು. ಅದರಿಂದ ರೈತರು ವಂಚಿತರಾಗುತ್ತಾರೆ. ಈ ಬಗ್ಗೆ ಸರಿಯಾದಂಥ ಒಂದು ಚಿಂತನೆ, ಆ ರಾಜಕೀಯ ಇಚ್ಛಾಶಕ್ತಿಯನ್ನು ನೀವು ಪ್ರಕಟ ಮಾಡದಿದ್ದರೆ ರೈತರಿಗೆ ಬಹಳ ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಮುಖ್ಯಮಂತ್ರಿಗಳ ಜೊತೆ ಮಾತನಾಡಿದೆವು. ಈ ಕಳಸಾ ಬಂಡೂರಿ ಬಗ್ಗೆ ಮಹದಾಯಿ ನದಿಯಿಂದ ಮಲಪ್ರಭಾ ನೀರನ್ನು ಕೊಡುವಂಥದ್ದು, 45 ಟಿ.ಎಂ.ಸಿ. ನೀರಿನ ಹಕ್ಕು ನಮಗೆ ಇದೆ. 7.5 ಟಿ.ಎಂ.ಸಿ. ನೀರಿಗೋಸ್ಕರ ಹೆಚ್.ಕೆ. ಪಾಟೀಲರ ಜೊತೆ ಮತ್ತು ಎಲ್ಲರ ಜೊತೆಯಲ್ಲೂ ನಾವು ಚರ್ಚೆಯನ್ನು ಮಾಡಿದ್ದೇವೆ. 60 ದಿವಸಕ್ಕೂ ಹೆಚ್ಚು ದಿನ ಅಲ್ಲಿ ಸತ್ಯಾಗ್ರಹ ಮಾಡಿದರು. ನಾವು ಸರ್ಕಾರದ ಪರವಾಗಿ ನಾವೇ ವಿರೋಧ ಪಕ್ಷದವರು ಅಲ್ಲಿ ಭರವಸೆ ಕೊಟ್ಟಿದ್ದೇವೆ. ಮುಖ್ಯಮಂತ್ರಿಗಳು ಸದನದಲ್ಲಿ ಭರವಸೆ ಕೊಟ್ಟಿದ್ದಾರೆ. ಅದರಂತೆ ಅವರು ನಡೆದುಕೊಳ್ಳುತ್ತಾರೆ. ಒಂದು ತಿಂಗಳೊಳಗಾಗಿ ಗೋವಾ ಮುಖ್ಯಮಂತ್ರಿಗಳ ಜೊತೆಗೆ ನಮ್ಮ ಒಂದು ನಿಯೋಗವನ್ನು ಪ್ರಧಾನಮಂತ್ರಿಯವರ ಹತ್ತಿರ ತೆಗೆದುಕೊಂಡು ಹೋಗಿ ಅವರ ಮನವೊಲಿಸಿ ಈ ಕಾರ್ಯವನ್ನು ಪ್ರಾರಂಭ ಮಾಡುತ್ತೇವೆ ಯಾವುದಾದರೂ ಕಾರಣಕ್ಕೆ ಗೋವಾ ಮತ್ತು ಕೇಂದ್ರ ಸರ್ಕಾರ ನಮಗೆ ವಂಚನೆಯನ್ನು ಮಾಡಿದರೆ ನಾವು ನಮ್ಮ ಕಾಲುವೆ ತೆಗೆಯುವಂಥ ಕೆಲಸ, ಕಾಮಗಾರಿ ಕೆಲಸವನ್ನು ನಾವು ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೇ, ನಾನು ಕಳಸಾ ಬಂಡೂರಿ ಬಗ್ಗೆ ಮಾತನಾಡುತ್ತಿದ್ದೇವೆ. ಕಳಸಾ ಬಂಡೂರಿ ಬಗ್ಗೆ ನೀವು ಒಂದು ಭರವಸೆಯನ್ನು ಕೊಟ್ಟಿದ್ದೀರಿ, ಒಂದು ತಿಂಗಳೊಳಗಾಗಿ ಪ್ರಧಾನಿಯವರನ್ನು ಭೇಟಿ ಮಾಡೋಣ, ಗೋವಾದ ಮುಖ್ಯಮಂತ್ರಿಗಳನ್ನು ಭೇಟಿ ಮಾಡೋಣ ಎಂದು. ಆ ಭರವಸೆಯ ಮೇಲೆ 60, 65 ದಿವಸಗಳ ಕಾಲ ಸತ್ಯಾಗ್ರಹ ಮಾಡಿದಂಥ ರೈತರನ್ನು ಶಾಂತವಾದ ರೀತಿಯಲ್ಲಿ ಅವೊತ್ತು ಏನು ಒಂದು ಆತಂಕದ ವಾತಾವರಣ ಇದ್ದರೂ ಕೂಡ ನಾವು ಅಲ್ಲಿಗೆ ಹೋಗಿ ಅವರನ್ನು ಮನವೊಲಿಸಿ ಎಬ್ಬಿಸಿದ್ದೇವೆ. ಇಲ್ಲೇನೂ ರಾಜಕಾರಣ ಇಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುವಂಥದ್ದು, ಏನೆಂದರೆ ನೀವು ಮನಸ್ಸು ಮಾಡಿದರೆ ಖಂಡಿತ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಇವೊತ್ತು ಗೋವಾ ಮುಖ್ಯಮಂತ್ರಿಗಳ ಮನವೊಲಿಸುವಂಥದ್ದಿರಬಹುದು,

ಕೇಂದ್ರ ಸರ್ಕಾರದ ಮನವೊಲಿಸುವಂಥದ್ದಿರಬಹುದು. ಅದನ್ನು ಮಾಡಲೇಬೇಕಾಗುತ್ತದೆ. ಅದು ವ್ಯರ್ಥವಾಗಿ ಸಮುದ್ರದ ಕಡೆಗೆ ಹರಿದುಹೋಗುತ್ತಿರುವಂಥ ನೀರು, ಇದನ್ನು ಮಾಡುವುದರಿಂದ ಕುಡಿಯುವ ನೀರಿಗೆ ಹೆಚ್ಚಿನ ಒಂದು ಆದ್ಯತೆ ಸಿಗುತ್ತದೆ. ಇದೇ ನಮ್ಮ ಮಾನ್ಯ ಹೆಚ್.ಕೆ. ಪಾಟೀಲರು ಪ್ರತಿನಿಧಿಸುವಂಥ ಹುಬ್ಬಳ್ಳಿ, ಧಾರವಾಡ, ಈ ಭಾಗದಲ್ಲಿ ವಾರಕ್ಕೆ, ಹತ್ತು ದಿನಕ್ಕೊಮ್ಮೆ ಕುಡಿಯುವ ನೀರನ್ನು ಕೊಡುವ ಪರಿಸ್ಥಿತಿ ಇದೆ, ಅದಕ್ಕೋಸ್ಕರ ನೀವು ಇಲ್ಲಿ ಭರವಸೆಕೊಟ್ಟಂತೆ ಒಂದು ತಿಂಗಳೊಳಗಾಗಿ, ಈಗಾಗಲೇ ಐದಾರು ದಿವಸ ಕಳೆದುಹೋಯಿತು. ಅಧಿವೇಶನ ಮುಗಿದ ತಕ್ಷಣ ಪ್ರಧಾನ ಮಂತ್ರಿಗಳನ್ನು ಮತ್ತು ಗೋವಾ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ನೀವೇ ಹೋಗಿ. ನಾವ್ಯಾರೂ ಬರಬೇಕು ಎಂದೇನಿಲ್ಲ. ಆದರೆ ಅವರ ಮನವೊಲಿಸಿ ಈ ಕಳಸಾ ಬಂಡೂರಿ ನಾಲಾ ಕೆಲಸ ಪ್ರಾರಂಭವಾಗುವ ಕಡೆಗೆ ತಾವು ವಿಶೇಷವಾದಂಥ ಗಮನವನ್ನು ಕೊಡಬೇಕು ಎನ್ನುವಂಥ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡುತ್ತೇನೆ. ಇಲ್ಲದಿದ್ದರೆ ಮತ್ತೆ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಬರಬಹುದು. ಮತ್ತೆ ಅಲ್ಲಿ ಹೋರಾಟ ಪ್ರಾರಂಭವಾಗಿ ಅದು ಯಾವ ದಿಕ್ಕು ಪಡೆಯುತ್ತದೋ ಗೊತ್ತಿಲ್ಲ, ಮತ್ತು ಅವರ ಸಂಯಮವನ್ನು ಪರೀಕ್ಷೆ ಮಾಡುವಂಥ ಕೆಲಸವನ್ನು ಈ ಸರ್ಕಾರ ಮಾಡಬಾರದು ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ನಾನು ಮುಖ್ಯಮಂತ್ರಿಗಳಿಗೆ ಹೇಳುವಂಥದ್ದು, ನಮ್ಮ ಜೊತೆಯಲ್ಲಿ ನೀವು ಇಷ್ಟೊಂದು ಆತ್ಮೀಯತೆಯಿಂದ ಮಾತನಾಡುತ್ತೀರಿ. ಯಾವುದೇ ಶಾಸಕರು ಬಂದರೆ ಒಂದು ಕ್ಷಣ ತಡಮಾಡದೇ ಅವರ ಕೆಲಸವನ್ನು ಮಾಡಿಕೊಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೀರಿ. ಆದರೆ ನಾನು ನಿಮ್ಮನ್ನು ಕೇಳುತ್ತೇನೆ. ನಿಮಗೆ ಈ ಬಾಗಲಕೋಟೆ ಪ್ಯಾಕೇಜ್ ಬಗ್ಗೆ ಏಕೆ ಈ ಆಕ್ರೋಶ? ಅಲ್ಲಿ ಎಂ.ಪಿ., ಎಂ.ಎಲ್.ಎ.ಗಳು ಬೇರೆ ಪಕ್ಷದವರು ಆಯ್ಕೆಯಾಗಿದ್ದಾರೆ ಎಂದು ಈ ರೀತಿ ಮಾಡುತ್ತೀರಾ? ನೀವೇನೇ 2002ರಲ್ಲಿ 638 ಕೋಟಿ ರೂಪಾಯಿಗಳ ಒಂದು ಪ್ಯಾಕೇಜ್‌ನ್ನು ಘೋಷಣೆಯನ್ನು ಮಾಡಿ, ಅಲ್ಲಿ ಸತ್ಯಾಗ್ರಹ ಚಳುವಳಿ ಆದಾಗ ಅಲ್ಲಿಗೆ ಎಂ.ಪಿ. ಪ್ರಕಾಶ್‌ರವರನ್ನು ತಾವು ಕಳುಹಿಸಿಕೊಟ್ಟಿರಿ ಮುಖ್ಯಮಂತ್ರಿಗಳೆ, ಆದರೆ ಇವೊತ್ತಿನವರೆಗೂ ಈ ಬಾಗಲಕೋಟೆ ಪ್ಯಾಕೇಜ್ ಬಗ್ಗೆ ನೀವು ಗಮನವನ್ನೇ ಹರಿಸಲಿಲ್ಲ ಎನ್ನುವುದಾದರೆ ಇದು ಮಲತಾಯಿ ಧೋರಣೆಯಲ್ಲವೆ? ಇದರಲ್ಲಿ ಎಂ.ಪಿ., ಎಂ.ಎಲ್.ಎ.ಗಳು ಬಿ.ಜೆ.ಪಿ. ಯವರು ಜಾಸ್ತಿಯಾಗಿದ್ದಾರೆ ಎಂದು ಹೇಳಿ ಅವರ ಕೆಲಸ ಕಾರ್ಯಗಳು ಆಗದೇನೇ ನಾವು ತಲೆತಗ್ಗಿಸಿ ಓಡಾಟ ಮಾಡಬೇಕು ಎಂದು ನೀವು ಈ ರೀತಿ ಮಾಡುತ್ತಿದ್ದೀರಿ ಎಂದು ನಾವು ತಿಳಿದುಕೊಳ್ಳೋಣವೆ? ಸನ್ಮಾನ್ಯ ಅಧ್ಯಕ್ಷರೆ, 1500 ಮನೆಗಳು ನವನಗರದಲ್ಲಿ ನಿರ್ಮಾಣವಾಗಿದೆ. ನಾನು ಹೋಗಿದ್ದೆ. ಈಗೊಂದು 25 ದಿವಸಗಳ ಹಿಂದೆ ನನ್ನನ್ನು ಬಾಗಲಕೋಟೆ ಭಾಗದ ಶಾಸಕರು ನಮ್ಮ ಚರಂತಿಮಠ್‌ರವರು ಕರೆದುಕೊಂಡು ಹೋಗಿದ್ದರು. ಅಲ್ಲಿ ಹೋಗಿ ನೋಡಿದರೆ 1500 ಮನೆಗಳು ರೆಡಿ ಇವೆ. ಅಲ್ಲಿ ಫಲಾನುಭವಿಗಳ ಪಟ್ಟಿ ಮಾಡಿ ಆ ಮನೆಗಳನ್ನು ಅವರ ವಶಕ್ಕೆ ಕೊಡುವಂಥದ್ದು ಆಗಬೇಕು. ಇವತ್ತು ಬಾಗಲಕೋಟೆಯ ನವನಗರದಲ್ಲಿ ಒಂದೂವರೆ ಸಾವಿರ ಮನೆ ಕಟ್ಟುತ್ತಿದ್ದಾರೆ ಇನ್ನು ಹೊಸದು ಕಟ್ಟುತ್ತಿದ್ದಾರೆ, ಕಟ್ಟಿ ಆಗಲೇ ಎರಡು ಮೂರು ವರ್ಷ ಕಳೆದುಹೋಯಿತು. ಫಲಾನುಭವಿಗಳನ್ನು ಐಡೆಂಟಿಫೈ ಮಾಡಿ ಅಲ್ಲಿಗೆ ಕಳುಹಿಸುವುದಿಲ್ಲವೆನ್ನುವುದಾದರೆ ನಿಮ್ಮ ಇಂಟೆನ್‌ಷನ್ ಏನು? ಮತ್ತು ಈ 638 ಕೋಟಿ ರೂಪಾಯಿಗಳ ಪ್ಯಾಕೇಜ್‌ನಲ್ಲಿ ನೀವು ಅದನ್ನು ಕಾರ್ಯರೂಪಕ್ಕೆ

ತರುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲವೆಂದರೆ, ಆ ಭಾಗದ ಜನಕ್ಕೆ ನೋಡಿ ಬಿಜೆಪಿ ಪಕ್ಷದ ಎಂಪಿ ಎಂಎಲ್ಎ ಗಳನ್ನು ಆಯ್ಕೆ ಮಾಡಿದ್ದೀರಿ, ಅದಕ್ಕೇ ನಿಮಗೆ ಇದು ಪನಿಶ್‌ಮೆಂಟ್ ಎಂದು ಹೇಳುವ ಅರ್ಥದಲ್ಲಿ ನೀವು ಮಾಡುತ್ತಿದ್ದೀರಾ? ಇದರ ಹಿನ್ನೆಲೆಯಲ್ಲಿ ನಾವು ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲದಲ್ಲಿ, ಮಾನ್ಯ ಹೆಚ್.ಕೆ. ಪಾಟೀಲ್ ಅವರಿಗೆ ಆ ಭಾಗದ ಸಮಸ್ಯೆ ಗೊತ್ತಿರುವ ಕಾರಣದಿಂದ ನೀವೆಲ್ಲಾ ಒಟ್ಟಿಗೆ ಇದ್ದ ಕಾಲದಲ್ಲಿ ಈ ರೀತಿ ಆ ಭಾಗದ ಜನರಿಗೆ ಅನ್ಯಾಯ ಮಾಡುತ್ತೀರಿ ಎಂದು ನಮಗೆ ಗೊತ್ತಿರಲಿಲ್ಲ. ನಾವು ವಿವರವಾದ ಚರ್ಚೆ ಮಾಡೋಣ. ನಾವು ಕಳೆದ ಮೂರು ದಿವಸದಲ್ಲಿ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆವು. ಒಂದು ಸಲ ಅದು ಚರ್ಚೆ ಪ್ರಾರಂಭವಾದರೆ ಬೇರೆ ರೂಪ ತೆಗೆದುಕೊಳ್ಳಬಹುದು. ನಮ್ಮ ಬೇರೆ ಚರ್ಚೆಗಳಿಗೆ ಅದು ಅಡ್ಡಿಯಾಗಬಹುದು ಎನ್ನುವ ಕಾರಣದಿಂದ ನಾವು ಇದನ್ನು ಸುಮ್ಮನೆ ಪ್ರಸ್ತಾವ ಮಾಡಿ ಮುಂದೆ ಹೋಗುತ್ತಿದ್ದೇವೆ. ನಾಳೆ ಅಥವಾ ನಾಡಿದ್ದು ಅದನ್ನು ನಿಲುವಳಿ ಸೂಚನೆ ಮೂಲಕ ಅಥವಾ ಮತ್ತೊಂದು ರೂಪದಲ್ಲಿ ಸಮಗ್ರವಾಗಿ ಚರ್ಚೆ ಮಾಡೋಣ. ಸರ್ಕಾರದ ಮನಸ್ಸಿನಲ್ಲಿ, ನಿಮ್ಮ ಉದ್ದೇಶ ಏನಿದೆ ಎನ್ನುವುದನ್ನು ಸ್ಪಷ್ಟ ಮಾಡಿ. ನಾವೇನೂ ಹೇಳಲಿಲ್ಲ, ನೀವೆ ಈ ಪ್ಯಾಕೇಜ್ ಅನೌನ್ಸ್ ಮಾಡಿರುವಂಥಾದ್ದು. ಅದರಲ್ಲಿ ನೀವು ನೂರು ಇನ್ನೂರು ಕೋಟಿಯೂ ಖರ್ಚು ಮಾಡಲಿಲ್ಲ, ಅದರಲ್ಲಿ 19 ರಿಂದ 20 ಕೋಟಿ ರೂಪಾಯಿ ಮೇಲೆ ಖರ್ಚು ಮಾಡಲಿಲ್ಲ ಎಂದರೆ ನಿಮ್ಮ ಉದ್ದೇಶ ಏನು? ಇದರ ಬಗ್ಗೆ ಬಹಳ ಸ್ಪಷ್ಟವಾದಂತಹ ಉತ್ತರವನ್ನು ನಾನು ನಿಮ್ಮಿಂದ ನಿರೀಕ್ಷೆ ಮಾಡುತ್ತೇನೆ. ಇನ್ನು ನಿಮ್ಮ ಹತ್ತಿರ ನಾನು ಮಾತನಾಡಬೇಕಾದರೆ ನೀವೂ ಹೇಳಿದಿರಿ, ನಿಮಗೂ ಆತಂಕ ಇದೆ, ರಾಜ್ಯದಲ್ಲಿ ಒಂದು ಕಡೆ ಒಳ್ಳೆಯ ಮಳೆಯಾಗಿದೆ ಎನ್ನುವ ಸಮಾಧಾನ, ಇನ್ನೊಂದು ಕಡೆ ಅತಿವೃಷ್ಟಿ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಾವು ಸಮಾಧಾನದ ಸ್ಥಿತಿಯಲ್ಲಿ ಇದ್ದರೂ ಸಹ ಇವತ್ತು ಪರಿಸ್ಥಿತಿ ಕೈಮೀರಿ ಹೋಗುವಂತಹ ಸ್ಥಿತಿ ಇದೆ. ಏನೂ ಬೇಡ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಪಿಡಬ್ಲ್ಯೂಡಿ ಮಿನಿಸ್ಟರ್‌ರವರು ಬೀರೂರು ಕಡೂರಿನಿಂದ ನಮ್ಮ ಶಿವಮೊಗ್ಗ ರಸ್ತೆಯಲ್ಲಿ ಹೋಗಿ ಬಂದು ಬಿಡಿ. ನಿನ್ನೆ ನಾನು ಆ ರೋಡಿನಲ್ಲಿ ವಾಪಸ್ಸು ಬಂದೆ. ಆ ಸ್ಥಿತಿ ನೋಡಿಬಿಟ್ಟರೆ, ಬಹುಶಃ 35 ರಿಂದ 40 ಕಿಲೊಮೀಟರ್ ಪ್ರಮಾಣಕ್ಕೆ ಒಂದೂವರೆಯಿಂದ ಎರಡು ಗಂಟೆ ಬೇಕಾಗುತ್ತದೆ. ಪೂರ್ತಿ ರಸ್ತೆ ಕೊಚ್ಚಿಕೊಂಡು ಹೋಗಿದೆ. ಮೊನ್ನೆ ಮಳೆ ಆದಮೇಲೆ ಮೊದಲೇ ರೋಡು ಸರಿಯಿರಲಿಲ್ಲ. ಟಾರು ಹಾಕಿ ರಸ್ತೆಗಳನ್ನು ಮಾಡಿ ಇನ್ನೂ ಮೂರ್ನಾಲ್ಕು ತಿಂಗಳು ಆಗಿಲ್ಲ, ರಸ್ತೆ ರಸ್ತೆಗಳೇ ಕೊಚ್ಚಿಕೊಂಡು ಹೋಗುತ್ತಿವೆ. ಕಳೆದ ಮೂರು ದಿವಸದಲ್ಲಿ ಆಗಿರುವಂತಹ ಅನಾಹುತ ಇದು. ಮಾನ್ಯ ಮುಖ್ಯಮಂತ್ರಿಗಳು ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಂದಿದ್ದಿರಿ. ನಮ್ಮ ಶಿವಮೊಗ್ಗದಿಂದ ಹೋಗಬೇಕಾದರೆ, ಸವಳಂಗದಿಂದ ನಮ್ಮ ಶಿಕಾರಿಪುರ ತೊಗ್ಗರ್ಸಿ ಬಾರ್ಡರ್‌ವರೆಗೆ ಎರಡೂ ಕಡೆ ರಸ್ತೆ ಕೊಚ್ಚಿಕೊಂಡು ಹೋಗಿದೆ. ಚುನಾವಣೆ ಸಮಯದಲ್ಲಿ ತಾವು ಬೇರೆ ರೂಟ್‌ನಲ್ಲಿ ಹೋಗಿ ಬಂದಿರಿ. ಆ ರೂಟ್ ಪೂರ್ತಿ ಯಾವುದೂ ಸಂಚಾರಕ್ಕೆ ಯೋಗ್ಯವಿಲ್ಲವೆಂದು ಹೇಳಿ, ಚುನಾವಣೆಗೆ ಬಂದಂತಹ ಎಲ್ಲಾ ಮುಖಂಡರು.....

ಶ್ರೀ ಎಂ.ವೈ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದು ಜರೂರು ಇದೆ. ಭೀಮಾ ನದಿಯ ಪ್ರವಾಹ ಬಹಳ ಹೆಚ್ಚಾಗುತ್ತಿದೆ. ನಮ್ಮ ಭಾಗದ ಹಳ್ಳಿಗಳಲ್ಲಿರುವವರು ಬಹಳ ಆತಂಕ ಪರಿಸ್ಥಿತಿಯಲ್ಲಿದ್ದಾರೆ. ಅದಕ್ಕೆ ಉಜ್ಜನಿ ಡ್ಯಾಮ್‌ದಿಂದ ನಿನ್ನೆ ನೀರು ಬಿಟ್ಟಿದ್ದಾರೆ, ಪ್ರವಾಹ ಬಹಳಷ್ಟು ಬರುತ್ತಿದೆ. ನದಿ

ದಂಡೆಯಲ್ಲಿನ ಹಳ್ಳಿಗಳಲ್ಲಿ ಇರುವಂತಹ ಜನರ ಪರಿಸ್ಥಿತಿ ಬಹಳ ಗಂಭೀರ ಇದೆ. ಆದುದರಿಂದ ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಅದಕ್ಕೆ ಸರ್ಕಾರ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿನಂತಿ ಮಾಡುವುದೇನೆಂದರೆ, ಈ ಅತಿವೃಷ್ಟಿಯಿಂದ ಮನೆಗಳು ಹಾಗೂ ರಸ್ತೆಗಳು ಹಾಳಾಗಿ ಕೆರೆಕಟ್ಟೆಗಳು ಒಡೆದು ಏನು ಅನಾಹುತವಾಗಿದೆ; 100 ಕೋಟಿ ರೂಪಾಯಿಯಾದರೂ ಈ ಅತಿವೃಷ್ಟಿಗೆ ಒಳಗಾದಂಥ ಜಿಲ್ಲೆಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ, ಕೆರೆಕಟ್ಟೆಗಳು ಒಡೆದು ಹೋಗಿರುವುದನ್ನು ಸರಿ ಮಾಡುವುದಕ್ಕೆ ರಸ್ತೆಗಳ ನಿರ್ಮಾಣಕ್ಕೆ ಮೊದಲನೇ ಇನ್‌ಸ್ಟಾಲ್‌ಮೆಂಟ್ ಎಂದು ಬಿಡುಗಡೆ ಮಾಡದಿದ್ದರೆ ದೊಡ್ಡ ಅನಾಹುತವಾಗುತ್ತದೆ. ಶಿವಮೊಗ್ಗ ಜಿಲ್ಲೆಯಲ್ಲಿ ಮೊನ್ನೆ ಡೆಪ್ಯುಟಿ ಕಮಿಷನರ್ ಎರಡೂವರೆ ಕೋಟಿ ರೂಪಾಯಿಗಳ ಒಂದು ಪ್ರಪೋಸಲ್‌ನ್ನು ಕಳುಹಿಸಿಕೊಟ್ಟಿದ್ದಾರೆ. ಮೊನ್ನೆ ನಾನು ಈ ವಿಷಯವನ್ನು ಇಲ್ಲಿ ಸದನದಲ್ಲಿ ಪ್ರಸ್ತಾಪ ಮಾಡಿ ಶಿಕಾರಿಪುರಕ್ಕೆ ಹೋಗಿದ್ದೆ. ನೀರಾವರಿ ಇಲಾಖೆ ಹೇಗೆ ಕೆಲಸ ಮಾಡುತ್ತದೆ ಎನ್ನುವುದಕ್ಕೆ ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ, ಅಲ್ಲಿ ಅಂಬಲಿಗೊಳ ಎಂದು ಒಂದು ಜಲಾಶಯ ಇದೆ. ಅದಕ್ಕೆ 1997–98 ರಲ್ಲಿ ಒಂದು ಮೀಟರ್‌ನಷ್ಟು ಡ್ಯಾಂ ಹೈಟ್ ಅನ್ನು ಜಾಸ್ತಿ ಮಾಡಿದರು. ಆಗ ಅದರ ಎಸ್ಟಿಮೇಟ್‌ನಲ್ಲಿ ಆ ಬಂಡೆ ಏರಿಯಾವನ್ನು ಸ್ಟೆಂಗ್ತನ್ ಮಾಡುವಂಥಾದ್ದು, ಮತ್ತು ಒಳಗಡೆ ಒಂದು ಮೀಟರ್ ಲೈನಿಂಗ್ ಮಾಡುವಂಥಾದ್ದು, ರೆವಿಟ್‌ಮೆಂಟ್ ಮಾಡುವಂಥಾದ್ದು ಎಲ್ಲ ಪ್ರಾವಿಜನ್ ಮಾಡಿಕೊಂಡಿದ್ದರು. ಅದನ್ನು ತರಾತುರಿಯಲ್ಲಿ ಕೆಲಸ ಮಾಡಿದರು, ಬಿಟ್ಟು ಹೊರಟುಹೋದರು. ಮತ್ತೆ ಆ ಕೆಲಸಕ್ಕೆ ಕೈ ಹಾಕಲಿಲ್ಲ. ಇದರ ಪರಿಣಾಮ ಏನಾಗಿದೆಯೆಂದರೆ ದೇವರು ದೊಡ್ಡವನು. ಈಗ ಆರೇಳು ವರ್ಷಗಳ ಹಿಂದೆ ಅಂಜನಾಪುರ ಜಲಾಶಯ ಒಡೆದುಹೋಗಿ ದೊಡ್ಡ ಅನಾಹುತವಾಯಿತು. ಈಗ ಅಂಬಲಿಗೊಳದಲ್ಲಿ ಹೋದವರ್ಷ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇನ್ಸ್‌ಪೆಕ್ಟರ್ ಮಾಡಿದಾಗಲೇ ಅಲ್ಲಿ ತೊಂಬು ಇತ್ತು ಅದನ್ನು ತಕ್ಷಣ ರಿಪೇರಿ ಮಾಡಬೇಕೆಂದು ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಬಂದು ಅಭಿಪ್ರಾಯ ಕೊಟ್ಟು ನೋಡಿಕೊಂಡು ಹೋದರು. ಮೊನ್ನೆ ದಿ: 10.7.05 ರಂದು ನಮ್ಮ ಇರಿಗೇಷನ್ ಸೆಕ್ರೆಟರಿಯವರನ್ನು ಕರೆದುಕೊಂಡು ಹೋಗಿ ನಾವೇ ತೋರಿಸಿಕೊಂಡು ಬಂದೆವು. ಇಷ್ಟಾದರೂ ಸಹ ಮಾನ್ಯ ಮುಖ್ಯಮಂತ್ರಿಗಳು ಅದರ ಕಡೆಗೆ ಗಮನ ಕೊಡಲಿಲ್ಲ. ಇದರ ಪರಿಣಾಮ ಇವತ್ತು 10 ರಿಂದ 12 ಅಡಿ ಅಗಲ ಅಲ್ಲಿ ಈ ಬಲನಾಲೆ ತೂಬಿನ ಹತ್ತಿರ ತೊಂಬು ಇತ್ತು. ಅದನ್ನು ಓಪನ್ ಮಾಡಿ ಅದನ್ನು ಸರಿ ಮಾಡಬೇಕೆಂದು ಇತ್ತು. ಅದನ್ನು ಮಾಡದೇ ಇದ್ದ ಪರಿಣಾಮ ಹತ್ತಾರು ಹಳ್ಳಿಗಳೇ ಮುಳುಗಿ ಹೋಗುತ್ತಿದ್ದವು. ಇಡೀ ಊರಿನ ಜನರೆಲ್ಲಾ ನಿಂತು ಮರಳು ಚೀಲಗಳನ್ನು ಹಾಕಿ ಏನೋ ಮಾಡಿ ಅದನ್ನು ಉಳಿಸಿದ್ದಾರೆ ಇನ್ನೊಂದು ಮಳೆ ಬಂದರೆ, 10,000 ಎಕರೆ ನೀರಾವರಿ ಆಗುವಂತಹ ಅಂಬಲಿಗೊಳ ಜಲಾಶಯ ಪೂರ್ತಿಯಾಗಿ ಇದೆಯೋ ಇಲ್ಲವೋ ಎಂದು ಕಾಣದೇ ಇರುವಂತಹ ಸ್ಥಿತಿ ಇದೆ. ಅಂದರೆ ಒಂದು ವರ್ಷದಿಂದ ಈ ಪರಿಸ್ಥಿತಿ ಇದ್ದರೂ ಸಹ ನಾನೇ ಇರಿಗೇಷನ್ ಸೆಕ್ರೆಟರಿಯವರನ್ನು ಕರೆದುಕೊಂಡು ತೋರಿಸಿದ ಮೇಲೂ ಸಹ ಅವರು ಗಮನ ಕೊಡುವುದಿಲ್ಲವೆನ್ನುವುದಾದರೆ, ನಾವು ಯಾವರೀತಿ ಕೆಲಸ ಮಾಡಬೇಕು? ಇದು ಏನನಿಸುತ್ತದೆ? ಎಂದೂ ಇಲ್ಲದ ಮಳೆ ಬಂತು ಅದಕ್ಕೆ ಈ ರೀತಿಯಾಯಿತು ಎಂದಲ್ಲ. ಇದು ಇರಿಗೇಷನ್ ಡಿಪಾರ್ಟ್‌ಮೆಂಟ್‌ನ ನೆಗ್ಲಿಜೆನ್ಸಿ, ಬೇಜವಾಬ್ದಾರಿ.

ಮಂಜೂರು ಆದಂತಹ ಕಡೆ ಅವರು ಗಮನವನ್ನು ಕೊಡುತ್ತಿಲ್ಲ, ನಾನೇ ಇರಿಗೇಷನ್ ಸೆಕ್ರೆಟರಿಯವರನ್ನು ಕರೆದುಕೊಂಡು ಹೋಗಿ ನೋಡಿ ಬಂದಮೇಲೂ ಸಹ ಕಳೆದ ಒಂದು ತಿಂಗಳಿನಿಂದ ಅವರು ಗಮನವನ್ನು ಕೊಡದ ಪರಿಣಾಮ, ಅಲ್ಲಿ ಒಂದು ದೊಡ್ಡ ಅನಾಹುತವೇ ಆಗುತ್ತಿತ್ತು. ಏನೋ ಮರಳು ಚೀಲಗಳನ್ನು ಹಾಕಿ ತಡೆದಿದ್ದಾರೆ ಇನ್ನೊಂದು ಸಲ ಅದೇ ರೀತಿ ಮಳೆಯಾದರೆ, 10,000 ಎಕರೆ ನೀರಾವರಿ ಆಗುವುದಿಲ್ಲ ಮತ್ತು ಹತ್ತಾರು ಗ್ರಾಮಗಳು ಮುಳುಗಡೆಯಾಗುತ್ತವೆ. ಇದು ಹೇಳುವವರು ಕೇಳುವವರು ಯಾರೂ ಇಲ್ಲದಂತಹ ಪರಿಸ್ಥಿತಿಯಾಗಿದೆ. ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ? ಲಾಸ್ಟ್ ಇಯರ್ ಅದೇ ಸ್ಥಳದಲ್ಲಿ ತೊಂಬು ಬಿದ್ದು, ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಇನ್ಸ್‌ಪೆಕ್ಟರ್ ಮಾಡಿ ಇದನ್ನು ತೆಗೆದುಕೊಳ್ಳಬೇಕೆಂದು ಹೇಳಿ ಬಂದಮೇಲೆ ಆ ಸ್ಪಾಟ್‌ಗೆ ಹೋದಾಗ. ನಿನ್ನೆ ದಿವಸ ನಾನು ಟೆಂಡರ್ ಕರೆಯುತ್ತೇನೆ ಎಂದು ಎಕ್ಸಿಕ್ಯುಟೀವ್ ಇಂಜಿನಿಯರ್ ಹೇಳುತ್ತಾರೆ. ಇದನ್ನು ನೋಡಿದಾಗ ಯಾವರೀತಿ ಇರಿಗೇಷನ್ ಡಿಪಾರ್ಟ್‌ಮೆಂಟ್ ಬೇಜವಾಬ್ದಾರಿಯಿಂದ ಕೆಲಸ ಮಾಡುತ್ತಿದೆ ಎಂದು ನಾನು ಒಂದು ಉದಾಹರಣೆ ಕೊಟ್ಟೆ ಅಷ್ಟೆ. ದಯಮಾಡಿ ಅದಕ್ಕೆ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಆ ಏರಿಯನ್ನು ಸ್ಟೆಂಗ್ದನ್ ಮಾಡಿ, ಒಳಗಡೆ ಫ್ರೀ ಬೋರ್ಡ್ ಲೆವೆಲ್ ಎಂದು ಹೇಳುತ್ತಾರಂತೆ, ಅದಕ್ಕೆ ಒಂದು ಮೀಟರ್ ರೆವಿಟ್‌ಮೆಂಟ್ ಆಗಬೇಕಾಗಿತ್ತು ಮಾನ್ಯ ಸಿಂಧ್ಯರವರೆ, ಅದಕ್ಕೆ ಎಸ್ಟಿಮೇಟ್ ಎಲ್ಲಾ ಮಾಡಿದ್ದರು. ಅವನು ಕೆಲಸ ಮಾಡದೇ ಹೊರಟು ಹೋದ. ಅದಾದಮೇಲೆ ಎಲ್ಲಾ ಕೈಬಿಟ್ಟುಬಿಟ್ಟರು. ಅದೇನೂ ಮಾಡದೆ ಇವತ್ತು ಈ ಪರಿಸ್ಥಿತಿ ಬಂದು ಆ ಜಲಾಶಯವೇ ಕಿತ್ತುಕೊಂಡು ಹೋಗುತ್ತದೆಯೇನೋ ಎನ್ನುವಂತಹ ಪರಿಸ್ಥಿತಿಗೆ ಬಂದಿದೆ. ಅಲ್ಲಿ ವೇಸ್ಟೇಜ್ ನೀರು ಹೋಗುವುದಕ್ಕೆ ಎಕ್ಸಸ್ ವಾಟರ್‌ಗೆ ಒಂದು ಪೈಪ್ ಹಾಕಿದ್ದಾರೆ. ಇನ್ನೊಂದು ಗೇಟ್ ಹಾಕಿದ್ದರೆ ಆ ಎಕ್ಸೆಸ್ ವಾಟರ್ ಹೋಗುತ್ತಿತ್ತು. ಅದು ಏನೂ ಮಾಡಿಲ್ಲ. ಆದುದರಿಂದ ತಾವು ತಕ್ಷಣ ಆ ಕಡೆ ಗಮನವನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛಪಡುತ್ತೇನೆ. ಮುಖ್ಯಮಂತ್ರಿಗಳೇ ಇನ್ನೊಂದು ವಿಚಾರ ಈ ಪಿಡಬ್ಲ್ಯೂಡಿ ನಲ್ಲಿ, ತಾವು ಆ ಒಂದು ಇಲಾಖೆಯನ್ನು ನೋಡುತ್ತಿದ್ದಿರಿ, ಮಾನ್ಯ ಎಸ್.ಎಂ. ಕೃಷ್ಣ ಅವರು ಇದ್ದಾಗ ನಿರ್ವಹಣೆಗೆ ಜಿಲ್ಲೆಗೊಂದು ಪ್ಯಾಕೇಜ್ ಎಂದು ಘೋಷಣೆಯನ್ನು ಮಾಡಿದರು. ಅವರು ಮೂರು ವರ್ಷ ನಿರ್ವಹಣೆ ಮಾಡಬೇಕಾಗಿತ್ತು. ನೀವು 224 ಜನ ಶಾಸಕರು ಯಾರನ್ನಾದರೂ ಕೇಳಿ, ಎಲ್ಲೂ ಸರಿಯಾಗಿ ನಿರ್ವಹಣೆ ಮಾಡಲಿಲ್ಲ. ದುಡ್ಡು ಹೊಡೆದರು ಎನ್ನುವುದನ್ನು ಬಿಟ್ಟರೆ, ಇನ್ನೇನೂ ಮಾಡಲಿಲ್ಲ. 31.3.2005ಕ್ಕೆ ಅವಧಿ ಮುಗಿದ ಮೇಲೆ ಪಿಡಬ್ಲ್ಯೂಡಿಯವರೂ ಕೂಡ ಆ ರಸ್ತೆಯನ್ನು ನಿರ್ವಹಣೆ ಮಾಡುವ ಹಾಗೆ ಇಲ್ಲ, ನಂತರ ಆ ಪೀರಿಯಡ್ ಮುಗಿಯುತ್ತದೆ ಎಂದರೆ ಯಾರಾದರೂ ಗುತ್ತಿಗೆದಾರರನ್ನು ಕರೆದು ವೆಲ್ ಇನ್ ಅಡ್ವಾನ್ಸ್ ಟೆಂಡರ್ ಕರೆದು ಯಾರಿಗಾದರೂ ವರ್ಕ್ ಅನ್ನು ಎಂಟ್ರಸ್ಟ್ ಮಾಡುವಂತಹ ಕೆಲಸವನ್ನು ಮಾಡಲಿಲ್ಲ. ಅದು ಕೆಲವು ಜಿಲ್ಲೆಗೆ ಮಾಡಿದರು, ಕೆಲವು ಜಿಲ್ಲೆಗೆ ಮಾಡಲಿಲ್ಲ. ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 760 ಕಿಲೋಮೀಟರ್ ರಸ್ತೆಯನ್ನು ಪಿಡಬ್ಲ್ಯೂಡಿಯವರು ಅದನ್ನು ಟಚ್ ಮಾಡುವ ಹಾಗೆ ಇಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ 60 ಕಿಲೋಮೀಟರ್ ಅಲ್ಲಿ ಬರುತ್ತದೆ. ಒಟ್ಟು 760 ಕಿಲೋಮೀಟರ್, ಅದಕ್ಕೆ ಒಂದು ಕೆಆರ್‌ಡಿಸಿಎಲ್ ಎಂದರೆ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ಅಂತ ಬಂದಿದೆ. ಆ ಪುಣ್ಯಾತ್ಮರಿಗೆ ಯಾರೋ ಶಿಕಾರಿಪುರದಿಂದ ನಮ್ಮ ಪ್ರಮುಖರು ಮಾತನಾಡಿ, ಅಸೆಂಬ್ಲಿಯಲ್ಲಿ ಚರ್ಚೆಯಾಗಿ ಒಂದು ಕೆಟ್ಟ

ಹೆಸರು ಬರುತ್ತದೆ, ತಕ್ಷಣ ಗಮನ ಕೊಡಿ ಎಂದರೆ, ಚರ್ಚೆಯಾಗಲಿ ಬಿಡಿ ಅದಕ್ಕೆನಂತೆ, ನಾವೇನು ಮಾಡುವುದಕ್ಕಾಗುತ್ತದೆ? ಇಂತಹ ರೇಂಕಾರದ ಉತ್ತರ ಆತನಿಂದ ಬರುತ್ತದೆ. ಅವನ್ಯಾರೋ ಕಂಟ್ರಾಕ್ಟರ್ 25, 30, 40 ಪರ್ಸೆಂಟ್ ಅಬೌವ್ ಎಸ್ಟಿಮೇಟ್ ಹಾಕಿದ್ದಾನಂತೆ. ಅವನನ್ನು ಕರೆದು ಮಾತನಾಡಿ ನಮಗೇನು ಸಂಬಂಧ? ಈ ಕಾರಣಕ್ಕಾಗಿ ಇವತ್ತು ಜುಲೈ ಕಳೆಯುತ್ತಾ ಬಂತು, ಆರು ತಿಂಗಳು ಕಳೆದೇ ಹೋಯಿತಲ್ಲಾ ಹಾಗಾದರೆ ಅದನ್ನು ಮೇಯಂಟೇನ್ ಮಾಡುವವರು ಯಾರು? ನಿಮಗೆ ಪುರುಸೊತ್ತು ಇಲ್ಲ, ಟೆಂಡರ್ ಅನ್ನು ಫೈನಲೈಜ್ ಮಾಡಿಬಿಟ್ಟು ಕೆಲಸವನ್ನು ವಹಿಸುವುದಕ್ಕೆ ಆಗುತ್ತಿಲ್ಲ ಎಂದರೆ, ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದೆ ಎನ್ನುವುದಾದರೆ, ಪಿಡಬ್ಲ್ಯೂಡಿ ರಸ್ತೆಗಳನ್ನು ಮೇಯಂಟೆನೆನ್ಸ್ ಮಾಡುವವರು ಯಾರೂ ಇಲ್ಲ ಎಂದರೆ, ಇದರ ಪರಿಣಾಮ ಏನಾಗಬಹುದು ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ. ಇನ್ನು ದಯಮಾಡಿ, ಈಗ ತಮ್ಮ ಗಮನಕ್ಕೆ ತರಬೇಕು ಎನ್ನುವ ದೃಷ್ಟಿಯಿಂದ ಒಂದೆರಡು ಮೂರು ಪ್ರಮುಖ ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಟ್ಟೆ. ನಾನು ಹೇಳಿದಾಗ ಒಂದು ವಿಷಯ ಮಾನ್ಯ ಮುಖ್ಯಮಂತ್ರಿಗಳ ತಲೆಗೆ ಹೋದರೆ ಬಹುಶಃ ನೀವು ಮಾಡಬಹುದು. ಯಾವುದೋ ಕಾಲದಲ್ಲಿ ಇಲ್ಲಿ ಒಂದು ಉತ್ತರ ಕೊಟ್ಟಿದ್ದಾರೆ, 'ಎಲ್ಲಾ ನೀರಾವರಿ ಪಂಪ್‌ಸೆಟ್ಸ್ ಸ್ಥಾವರಗಳಿಗೆ ಮೂರು ತಿಂಗಳಿಗೊಮ್ಮೆ ಬಿಲ್ ಮಾಡಲಾಗುತ್ತದೆ' ಎಂದು ಅಧೀಕ್ಷಕ ಇಂಜಿನಿಯರ್ ಕೊಟ್ಟಿರುವುದು. ಈ ರೀತಿ ಬಿಲ್ ಮಾಡಿದಂತಹ ಹಣವನ್ನು ಬಿಲ್ ಮಾಡಿದ 15 ದಿನಗಳೊಳಗಾಗಿ ಪಾವತಿ ಮಾಡಬೇಕಾಗುತ್ತದೆ. ತಪ್ಪಿದಲ್ಲಿ ಗಡುವಿನ ನಂತರ ಸಂದಾಯ ಮಾಡಿದ ಅವಧಿಗೆ ಎಲ್‌ಟಿ ಸ್ಥಾವರಗಳಿಗೆ ಕನಿಷ್ಠ ಒಂದು ಮಿತಿಗೆ ಒಳಪಟ್ಟು ತಿಂಗಳಿಗೆ ಶೇಕಡ 2 ರಂತೆ ವಿಳಂಬವಾದ ವಾಸ್ತವಿಕ ದರಕ್ಕೆ ಸರಳ ಬಡ್ಡಿಯನ್ನು ಮಾತ್ರ ವಿಧಿಸಲಾಗುತ್ತದೆ. ಎರಡು ಪರ್ಸೆಂಟ್ ಸರಳ ಬಡ್ಡಿ ಎಂದರೆ 24 ಪರ್ಸೆಂಟ್ ಆಯಿತು. ಮಾನ್ಯ ಮುಖ್ಯಮಂತ್ರಿಗಳೇ, ಪಂಪ್‌ಸೆಟ್‌ಗಳಿಗೆ ಬಾಕಿ ಕಟ್ಟಲಿಲ್ಲವೆಂದರೆ 24 ಪರ್ಸೆಂಟ್ ಬಡ್ಡಿ ಆಗುತ್ತದೆ. ಇದು ಧರ್ಮ ಅಲ್ಲ. ಯಾರು ಪ್ರಾಮಾಣಿಕವಾಗಿ ಕಟ್ಟುತ್ತಿದ್ದಾರೆ, ಯಾರದ್ದೋ ಕಾಲದಲ್ಲಿ ಇದು ಆಗಿದ್ದು. ದಯಮಾಡಿ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಿ, ಯಾರಾದರೂ ಅದರ ಬಗ್ಗೆ ಗಮನಹರಿಸಿ. ಏಕೆಂದರೆ ರೈತ ಇವತ್ತು ಬದುಕುವುದಕ್ಕೆ ಆಗದೇ ಇರುವಂತಹ ಉಸಿರು ಕಟ್ಟುವಂತಹ ಕಾಲದಲ್ಲಿ 6 ಪರ್ಸೆಂಟ್ ಬಡ್ಡಿಯಲ್ಲಿ ಕೋ–ಆಪರೇಟಿವ್ ಲೋನ್ ಕೊಡುತ್ತಿರುವಂತಹ ಈ ಕಾಲದಲ್ಲಿ ಬಾಕಿ ಕಟ್ಟದೆ ಇರುವ ಮೊತ್ತಕ್ಕೆ 2 ಪರ್ಸೆಂಟ್‌ನಂತೆ ಪ್ರತಿ ತಿಂಗಳೂ ಬಡ್ಡಿ ಹಾಕುತ್ತೇವೆಂದರೆ ಇದು ಯಾವ ಧರ್ಮ? ಇದು ಎಷ್ಟರಮಟ್ಟಿಗೆ ಸರಿ? ದಯಮಾಡಿ ಅದನ್ನು ವಿತ್‌ಡ್ರಾ ಮಾಡಿಕೊಳ್ಳಿ. ಏಕೆ ಬಡ್ಡಿ ಹಾಕುತ್ತೀರಾ? ವರ್ಷಕ್ಕೊಮ್ಮೆ ಬಿಲ್ ಮಾಡಿ, ವರ್ಷದ ನಂತರ ಬೇಕಾದರೆ ಏನಾದರೂ ನಾಮಿನಲ್ ಆಗಿ ಇಂಟರೆಸ್ಟ್ ಹಾಕಿದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ದಯಮಾಡಿ ವರ್ಷಕ್ಕೊಮ್ಮೆ ಅವನು ಪಾವತಿ ಮಾಡುವವರೆಗೂ ಯಾವುದೇ ಬಡ್ಡಿಯನ್ನು ಹಾಕದೆ ಅದನ್ನು ಸರಿಪಡಿಸಬೇಕು ಎನ್ನುವಂತಹ ಒತ್ತಾಯವನ್ನು ನಾನು ನಿಮಗೆ ಮಾಡುತ್ತಿದ್ದೇನೆ. ಇನ್ನು ಈ ವ್ಯಾಟ್ ತೆರಿಗೆ ಬಂದಮೇಲೆ ಹಿಂದೆ ರೈತರ ಕೆಲಸಕಾರ್ಯಗಳಿಗೆ ಅವಶ್ಯಕವಾಗಿರುವಂತಹ ಎತ್ತಿನಗಾಡಿಯ ಬಿಡಿಭಾಗಗಳಿಗೆ ಶೇ. 12.5 ರಷ್ಟು ತೆರಿಗೆಯನ್ನು ತಾವು ವಿಧಿಸುತ್ತಿದ್ದೀರಿ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇವರಿಗೆ ಯಾವುದಕ್ಕೂ ತೆರಿಗೆಯನ್ನು ಹಾಕುತ್ತಾ ಇರಲಿಲ್ಲ. ಈಗ ಅದು ಒಂದು ಸಿಸ್ಟಂನಲ್ಲಿ ಸೇರಿಕೊಂಡು ಬಿಟ್ಟಿದೆ. ದಯಮಾಡಿ ಎತ್ತಿನಗಾಡಿಗೆ ಸಂಬಂಧಪಟ್ಟಂಥ ಬಿಡಿಭಾಗಗಳಿಗೆ ವಿಧಿಸಿರುವ ತೆರಿಗೆಯನ್ನು

ತೆಗೆದುಹಾಕಬೇಕು. ಇನ್ನು ರೈತ ಚಟುವಟಿಕೆಯಾದ ಎಣ್ಣೆ ಗಾಣದ ಮೇಲೆ ಹಾಲಿ ವಿಧಿಸಿರುವಂತಹ ತೆರಿಗೆಯನ್ನು ತೆಗೆದುಹಾಕಬೇಕು. ಈ ಕುಸುಬೆ ಎಣ್ಣೆ, ಗಾಣಗಳಿಂದ ತೆಗೆಯುವಂತಹ ಎಣ್ಣೆಗಳಿಗೂ ಇವತ್ತು ಇರುವ ತೆರಿಗೆಯನ್ನು ತೆಗೆದುಹಾಕಬೇಕು, ಮತ್ತೆ ಹನಿ ನೀರಾವರಿಗೆ ಉಪಯೋಗಿಸುವಂತಹ ಮೈಕ್ರೊ ಟ್ಯೂಬ್‌ಗಳು ಏನು ಇವೆ, ಇದಕ್ಕೆ ಶೇ. 12.5 ರಷ್ಟು ತೆರಿಗೆಯನ್ನು ನೀವು ಹಾಕುತ್ತಿದ್ದೀರಿ. ಮಹಾರಾಷ್ಟ್ರ, ತಮಿಳುನಾಡಿನಲ್ಲಿ, ಆಂಧ್ರಪ್ರದೇಶಗಳಲ್ಲಿ ಈ ತೆರಿಗೆ ಇಲ್ಲ. ಆದುದರಿಂದ ದಯಮಾಡಿ ಈ ಎಲ್ಲಾ ತೆರಿಗೆಗಳನ್ನು ತೆಗೆದುಹಾಕಿ, ರೈತರು ನೆಮ್ಮದಿಯಾಗಿ ಬದುಕುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಈ ಬಜೆಟ್ ಬಗ್ಗೆ ಚರ್ಚೆ ಮಾಡುವಂಥ ಕಾಲದಲ್ಲಿ ಭಾಗವಹಿಸದೇ ಇದ್ದರೂ, ಈಗಾಗಲೇ ರಿಪ್ಲೈ ಪ್ರಾರಂಭವಾಗಿದೆ. ಆದುದರಿಂದ ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ, 8–10 ನಿಮಿಷಗಳ ಸಮಯವನ್ನು ಮಾತ್ರ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇ. ಮಾನ್ಯ ಮಂತ್ರಿಯವರು ಉತ್ತರ ಕೊಡುವಂತಹ ಸಂದರ್ಭದಲ್ಲಿ, ನಮ್ಮದು ಒಂದೇ ಒಂದು ವಿನಂತಿ ಏನೆಂದರೆ, ನಾವು ಈ ಕಡೆಯಿಂದ ಏನು ಮಾತನಾಡಿದ್ದೇವೆ, ಅದಕ್ಕೆ ನೀವು ಏನು ಮಾಡುತ್ತೀರಾ, ಅದರ ಬಗ್ಗೆ 1,2,3 ಎಂದು ತಾವು ರಿಪ್ಲೈ ಮಾಡುವಂತಹ ಸಂದರ್ಭದಲ್ಲಿ ನಮಗೆ ಸ್ಪಷ್ಟೀಕರಣವನ್ನು ಕೊಟ್ಟು, ಈ ಕಡೆಯಿಂದ ಮಾತನಾಡಿದಂತಹ ವಿಯಷಗಳಿಗೆ ಉತ್ತರವನ್ನು ಕೊಟ್ಟು, ಒಂದು ಒಳ್ಳೆಯ ರೀತಿಯ ಮೆಸೇಜ್ ಈ ರಾಜ್ಯದ ಜನತೆಗೆ ಹೋಗುವ ರೀತಿಯಲ್ಲಿ ತಾವು ಗಮನವನ್ನು ಕೊಡಬೇಕು, ಎನ್ನುವಂಥ ಒತ್ತಾಯವನ್ನು ಮಾತ್ರ ಈ ಸಂದರ್ಭದಲ್ಲಿ ಮಾಡುತ್ತೇನೆ. ನಾನು ಈಗಾಗಲೇ ಹೇಳಿದ್ದೆ. ಬಾಗಲಕೋಟೆ ತಾಲ್ಲೂಕಿನ ಬೊಮ್ಮಣಗಿ, ಹುನಗುಂದ ತಾಲ್ಲೂಕಿನ ತುರಡಗಿ, ಈ ಭಾಗಗಳಲ್ಲಿ ನಾರಾಯಣಪುರ ಅಣೆಕಟ್ಟಿನಿಂದ ಹಿನ್ನೀರು ನುಗ್ಗಿದೆ ಮತ್ತು ಊರಿನಲ್ಲಿ ಅನಾಹುತಗಳು ಆಗಿವೆ, ಈ ರೀತಿಯಲ್ಲಿ ಅನೇಕ ಕಡೆಗಳಿಂದ ಆಗಿರುವಂತಹ ವರದಿಯನ್ನು ತಾವು ತರಿಸಿ, ಕನಿಷ್ಠ 100 ಕೋಟಿ ರೂಪಾಯಿಗಳನ್ನು ಆದರೂ ಇವತ್ತೇ ಬಿಡುಗಡೆ ಮಾಡಿ, ಅತಿವೃಷ್ಟಿಯಿಂದ ಯಾವ ಹಳ್ಳಿಗಳಿಗೆ ನೀರು ನುಗ್ಗಿದೆ, ಕೆರೆಕಟ್ಟೆಗಳು ಹಾಳಾಗಿವೆ, ಜಲಾಶಯಗಳಿಗೆ ತೊಂದರೆಯಾಗಿದೆ. ಅಲ್ಲಿ ಅನುಕೂಲ ಮಾಡಿಕೊಡಬೇಕು. ಆದುದರಿಂದ ಇವತ್ತೇ ಹಣವನ್ನು ಬಿಡುಗಡೆ ಮಾಡಿ, ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟಂಥ ಇಲಾಖಾಧಿಕಾರಿಗಳು ತತಕ್ಷಣ ಕೆಲಸವನ್ನು ಮಾಡುವ ಬಗ್ಗೆ ತಾವು ವಿಶೇಷವಾದ ಗಮನವನ್ನು ಕೊಡಬೇಕೆಂದು ಒತ್ತಾಯವನ್ನು ಮಾಡಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

2. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಅ) ಉಪ ಮುಖ್ಯಮಂತ್ರಿಗಳ ಗೈರು ಹಾಜರಿ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಈ ಆಯವ್ಯಯ ಮಂಡನೆ ಆಯಿತು, ಇದು ಮಾಡಿದ್ದು ಮತ್ತು ಬೇಡಿಕೆಗಳು ಎಂದು ಇದು ಎರಡು ಭಾಗಗಳಾಗಿ ನಾವು ಮಾಡಿದ್ದೇವೆ. ಮೊದಲು ಆಯವ್ಯಯದ ಬಗ್ಗೆ ಸಮಗ್ರವಾಗಿ, ವಿಸ್ತಾರವಾಗಿ ಚರ್ಚೆಯಾಯಿತು. ಈಗ ಬೇಡಿಕೆಗಳ ಮೇಲೆ ಚರ್ಚೆ ಮತ್ತು ಮತದಾನ ನಡೆದು ನಂತರ ಆ ಸದನಕ್ಕೆ ಹೋಗಬೇಕಾದದ್ದು. ಇಲ್ಲಿ ಬಹಳ ಪ್ರಮುಖವಾಗಿ ಎದ್ದುಕಾಣುತ್ತಿರುವಂಥಾದ್ದು ಏನೆಂದರೆ ಆಯವ್ಯಯವನ್ನು ಮಂಡಿಸಿದಂತಹ ಉಪ ಮುಖ್ಯಮಂತ್ರಿಗಳಾಗಿರುವಂತಹ ಮಾನ್ಯ ಸಿದ್ದರಾಮಯ್ಯನವರು, ಸದನದಲ್ಲಿ ಇಲ್ಲ. ಇದಕ್ಕೆ ಕಾರಣ ಏನು? ಇದು ಬಹಳ ಪ್ರಾಮುಖ್ಯ, ಏಕೆಂದರೆ ಇವತ್ತು ಅವರು ಸದನದಲ್ಲಿ